ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಮುಇ(ವಿ)/ಬೆಂಮಕ್ಷೇವ/ಅಇ/ಸಕಾಇ-3/ಕ-115/7673-76
ಲಗತ್ತು:

Phone No.22113868.
Mobile no.9449045888.
Email: cebmaz.work@gmail.com
Fax: 080-22113839

ಮುಖ್ಯ ಇಂಜಿನಿಯರ್(ವಿ) ರವರ ಕಛೇರಿ,
(ವಾಣಿಜ್ಯ, ಕಾರ್ಯ ಮತ್ತು ಪಾಲನೆ)
ಬೆಂಗಳೂರು ಮಹಾನಗರಕ್ಷೇತ್ರ ವಲಯ
ನಂ.14/3, 3ನೇ ಮಹಡಿ, ಮಹರ್ಷಿಅರವಿಂದ
ಭವನ, ಬೆಂಗಳೂರು-560 001.
ದಿನಾಂಕ: 30-01-2015

**ಗೆ,**

ಶ್ರೀ. ಸಂಜೀವಯ್ಯ,
ಜಿಪಿಎ, ಮೆ. ಬೋಲಿನೆನಿ ಡೆವಲಪರ್ಸ್,
ಕೆ. ಆರ್. ಪುರಂ ಹೋಬಳಿ,
ಸಾದರ್‌ಮಂಗಳ ಗ್ರಾಮದ,
ಸ.ನಂ. 11, 12/1 ಮತ್ತು 13,
ಬೆಂಗಳೂರು.

**ಮಾನ್ಯರೆ,**

**ವಿಷಯ:-** ಇಂದಿರಾನಗರ ವಿಭಾಗದ, ಇ-7 ಉಪ ವಿಭಾಗ ವ್ಯಾಪ್ತಿಯ ಕೆ. ಆರ್. ಪುರಂ ಹೋಬಳಿ ಸಾದರ್‌ಮಂಗಳ ಗ್ರಾಮದ ಸ.ನಂ. 11, 12/1 ಮತ್ತು 13 ರಲ್ಲಿ **ಶ್ರೀ. ಸಂಜೀವಯ್ಯ ಮತ್ತು ಇತರರು ಜಿಪಿಎ ಮೆ. ಬೋಲಿನೆನಿ ಡೆವಲಪರ್ಸ್** ರವರು ನಿರ್ಮಿಲಿಸಲುದ್ದೇಶಿಸಿರುವ ಬಹುಮಹಡಿ ವಸತಿ ಕಟ್ಟಡಕ್ಕೆ **ಎಲ್.ಟಿ** ಆಧಾರದ ಮೇಲೆ ಒಟ್ಟು **2930 ಕೆವಿಎ** ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಪೇಕ್ಷಣಾ ಪತ್ರವನ್ನು ನೀಡಲು ಅನುಮೋದನೆ ಕೋರಿ ಸಲ್ಲಿಸಿರುತ್ತಿರುವ ಪ್ರಸ್ತಾವನೆ ಕುರಿತು.

**ಉಲ್ಲೇಖ:-** ಪತ್ರ ಸಂ. ಬಿಸಿ-18/ ಮುಪ್ರವ್ಯ(ಕಾ) /ಉಪ್ರವ್ಯ-3/ಸ.ಪ್ರ.ವ್ಯ-1/F-533(28)/14-15/13250 ದಿನಾಂಕ: 23.01.2015.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಇಂದಿರಾನಗರ ವಿಭಾಗದ, ಇ-7 ಉಪ ವಿಭಾಗ ವ್ಯಾಪ್ತಿಯ ಕೆ. ಆರ್. ಪುರಂ ಹೋಬಳಿ ಸಾದರ್‌ಮಂಗಳ ಗ್ರಾಮದ **ಸ.ನಂ. 11, 12/1 ಮತ್ತು 13** ರಲ್ಲಿ **ಶ್ರೀ. ಸಂಜೀವಯ್ಯ ಮತ್ತು ಇತರರು ಜಿಪಿಎ ಮೆ. ಬೋಲಿನೆನಿ ಡೆವಲಪರ್ಸ್** ರವರು ನಿರ್ಮಿಲಿಸಲುದ್ದೇಶಿಸಿರುವ ಬಹುಮಹಡಿ ವಸತಿ ಕಟ್ಟಡಕ್ಕೆ **ಎಲ್.ಟಿ** ಆಧಾರದ ಮೇಲೆ ಒಟ್ಟು **2930 ಕೆವಿಎ** ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಪೇಕ್ಷಣಾ ಪತ್ರವನ್ನು ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ), ಆಪರೇಷನ್ಸ್, ಬೆವಿಕಂ ರವರು ಉಲ್ಲೇಖ ಪತ್ರದಲ್ಲಿ ನೀಡಿರುವ ಅನುಮೋದನೆಯನ್ವಯ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

I <u>ನಿಯತ ವಿದ್ಯುತ್ ಸರಬರಾಜು ವ್ಯವಸ್ಥೆ:</u> ಭಾವಿ ಗ್ರಾಹಕರು ಒಟ್ಟು 2930 ಕೆ.ವಿ.ಎ. ವಿದ್ಯುತ್ ಸಂಪರ್ಕ ಪಡೆಯುವ ಸಂಬಂಧ, ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11 ಕೆ.ವಿ. Army Welfare Housing Organization ವಿದ್ಯುತ್ ಉಪಕೇಂದ್ರದಲ್ಲಿ ನೂತನ 11 ಕೆ.ವಿ. ಬ್ರೇಕರ್ ಅನ್ನು ಅಳವಡಿಸಿ, ಅಲ್ಲಿಂದ ಮುಂದಕ್ಕೆ, ಸುಮಾರು 6 ಕಿ.ಮೀ.ಗಳಷ್ಟು ದೂರ ನೂತನ 11 ಕೆ.ವಿ. ಮಾರ್ಗವನ್ನು 3*400 ಚ.ಮಿ.ಮೀ. ಹೆಚ್.ಟಿ ಭೂಗತ ಕೇಬಲ್‌ನೊಂದಿಗೆ ತಮ್ಮ ಆವರಣದವರೆಗೆ ಅಳವಡಿಸುವುದು.

2 <u>ಪರ್ಯಾಯ ವಿದ್ಯುತ್ ಸರಬರಾಜು ವ್ಯವಸ್ಥೆ:</u> ಭಾವಿ ಗ್ರಾಹಕರು ಒಟ್ಟು 2930 ಕೆ.ವಿ.ಎ. ವಿದ್ಯುತ್ ಸಂಪರ್ಕ ಪಡೆಯುವ ಸಂಬಂಧ, ತಮ್ಮ ಆವರಣಕ್ಕೆ ಹತ್ತಿರವಿರುವ 66/11 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ಕಡಿಮೆ ಹೊರೆ ಹೊಂದಿರುವ 11ಕೆವಿ ಮಾರ್ಗದಿಂದ ಪಡೆಯುವುದು.

3 **ಸದರಿ ನಿರಾಕ್ಷೇಪಣಾ ಪತ್ರದ ಸಿಂಧುತ್ವದ ಅವಧಿಯು ಅನುಮೋದನೆ ನೀಡಿದ ದಿನದಿಂದ 1 (ಒಂದು) ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು, ವಿದ್ಯುತ್ ಸರಬರಾಜು ಮಾಡಲು ಮಂಜೂರಾತಿ ನೀಡುವ ಅವಧಿಯಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಕುರಿತು ಪರಿಶೀಲಿಸಲಾಗುವುದು.**

...............2

4 ಸದರಿ ಅನುಮೋದನೆಯು ಮುಂಬರುವ ಕ.ವಿ.ಪ.ನಿ.ನಿ. ತಾಂತ್ರಿಕ ಸಮನ್ವಯ ಸಮಿತಿ ಸಭೆಯ ಅನುಸಮರ್ಥನೆಗೆ ಒಳಪಟ್ಟಿರುತ್ತದೆ.

5 ಭವಿಷ್ಯದಲ್ಲಿ ಭಾವಿ ಗ್ರಾಹಕರ ಕೋರಿಕೆಯು 7500 ಕೆ.ವಿ.ಎ. ಮೀರಿದಲ್ಲಿ ತಮ್ಮ ಆವರಣದಲ್ಲಿ ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಿಕೊಂಡು 66 ಕೆ.ವಿ. ಆಧಾರದ ಮೇಲೆ ಪಡೆಯುವುದು.

6 ಈ ನಿರಾಪೇಕ್ಷಣಾ ಪತ್ರದಿಂದ ಬರುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.

7 ಭಾವಿ ಗ್ರಾಹಕರ ಆವರಣದಲ್ಲಿ ಯಾವುದೇ ಬೆವಿಕಂ/ಕೆಪಿಟಿಸಿಎಲ್ ವಿದ್ಯುತ್ ಮಾರ್ಗಗಳು ಹಾದು ಹೋಗುತ್ತಿದ್ದಲ್ಲಿ ಅವುಗಳನ್ನು ಭಾವಿ ಗ್ರಾಹಕರೇ ಬೆವಿಕಂ/ಕೆಪಿಟಿಸಿಎಲ್ ನಿಯಮಗಳಿಗೆ ಅನುಸಾರವಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಸ್ಥಳಾಂತರಗೊಳಿಸುವುದು.

8 ಮೇಲ್ಕಂಡ ಭಾವಿ ಗ್ರಾಹಕರ ಆವರಣದಲ್ಲಿ, ಮುಂಬರುವ ದಿನಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಾಗ ಭಾವಿ ಗ್ರಾಹಕರು ಹಾಲಿ ಚಾಲ್ತಿಯಲ್ಲಿರುವ ಕರ್ನಾಟಕ ಕೆ.ಇ.ಆರ್.ಸಿ ನಿಬಂಧನೆಗಳನ್ನು ಮತ್ತು ವಿದ್ಯುತ್ ಸರಬರಾಜು ನಿಯಾಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

9 ಮೇಲ್ಕಂಡ ಆವರಣದಲ್ಲಿ ಬರುವ ವಿವಿಧ ಕಟ್ಟಡಗಳಿಗೆ ಬೆವಿಕಂ ನಿಯಮಗಳಿಗೆ ಅನುಸಾರವಾಗಿಯೇ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

10 ಈ ನಿರಾಪೇಕ್ಷಣಾ ಪತ್ರವನ್ನು ಭಾವಿ ಗ್ರಾಹಕರು ಬಿಡಿಎ/ಬಿಬಿಎಂಪಿ ಅಥವಾ ತತ್ಸಂಬಂಧ ಇಲಾಖೆಗಳಿಂದ ಬಹುಮಹಡಿ ಕಟ್ಟಡದ ಮಂಜೂರಾತಿ ನಕ್ಷೆಪಡೆಯಲು ನೀಡಲಾಗಿದೆ ವಿನಹ ಬೆವಿಕಂ ಯಾವುದೇ ವಿದ್ಯುತ್ ಮಂಜೂರಾತಿ ನೀಡಲು ಬದ್ಧವಾಗಿರುವುದಿಲ್ಲ. ವಿದ್ಯುತ್ ಕೋರಿಕೆಯನ್ನು ಆ ವೇಳೆಯಲ್ಲಿ ತಾಂತ್ರಿಕ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಿ ನೀಡಲಾಗುವುದು.

ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸುವಾಗ ಕರ್ನಾಟಕ ರಾಜ್ಯದ ಅನುಮತಿ ಪಡೆದ ಕ್ಲಾಸ್–1 ಗುತ್ತಿಗೆದಾರರ ಮುಖೇನ ಕೆ.ಪಿ.ಟಿ.ಸಿ.ಎಲ್./ಬೆ.ವಿ.ಕಂ., ಅಧಿಕಾರಿಗಳ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.

ತಮ್ಮ ವಿಶ್ವಾಸಿ,

ಮುಖ್ಯ ಇಂಜಿನಿಯರ್ (ವಿ),
ಬೆಂಗಳೂರು ಮಹಾನಗರಕ್ಷೇತ್ರವಲಯ